

ಚಿತ್ರಗಳನ್ನು ತೋರಿಸಿದೆವು. ಕೊನೆಗೊಂದಿಷ್ಟು ಹದವಾಗಿ ದೇಶಾವರಿ ಖುಷಿ ತೋರಿಸಿ 'ಎನಿ ಹೌವ್, ನೀವು ರೆಕಾರ್ಡ್ ಮಾಡಿ ಬಿಟ್ಟಿರಿ. ನಮ್ಮ ಓಲ್ಡ್ ಮ್ಯಾಗಝೀನ್ ಇತಿಹಾಸದಲ್ಲಿ ಯಾರೂ ಇಲ್ಲೀ ತನಕ ಚಿರತೆ ಪಟ ತೆಗೆದಿರಲಿಲ್ಲ. ನೀವು ತೆಗೆದಿದ್ದೀರಿ. ಕಂಗ್ರಾಟ್ಸ್. ಇದನ್ನು ಅಚ್ಚು ಹಾಕಿಸಿ ಕೊಡಿ. ನಮ್ಮಲ್ಲಿ ಹೆಮ್ಮೆಯಿಂದ ಈ ಚಿತ್ರವನ್ನು ಹಾಕುತ್ತೇವೆ' ಎಂದರು.

ಕ್ಯಾಂಪಿನಲ್ಲಿದ್ದವರಿಗೆ ಪಟಪಟ ಈ ಸುದ್ದಿ ತಲುಪಿ ಹೋಗಿತ್ತು. 'ಇದೆಲ್ಲಾ ಹೇಗಾಯಿತು, ಏನೇನಾಯಿತು?' ಎಂದು ಕೌತುಕದಿಂದ ಎಲ್ಲರೂ ಕೇಳುತ್ತಿದ್ದರು. ಮತ್ತೆಮತ್ತೆ ವಿವರಿಸಿ ಹೇಳುವ ನಾವಿಬ್ಬರು ಆ ದಿನ ಹೀರೋಗಳಂತೆ ಮಿಂಚತೊಡಗಿದೆವು. ಕೆಲವರು ಅಭಿನಂದಿಸಿದರು. ಇನ್ನೊಂದಿಷ್ಟು ಜನ 'ಭಲೇ ಅದೃಷ್ಟವಂತರು ನೀವು' ಎಂದರು. 'ಛೇ ಕರೆದಿದ್ದರೆ ನಾವು ಬರುತ್ತಿದ್ದೆವು. ಎಂಥಾ ಛಾನ್ಸ್ ಮಿಸ್ಸಾಯಿತಲ್ಲ' ಎಂದು ಕೆಲವರು ಕೊರಗಿದರು.

ಅರಣ್ಯ ಇಲಾಖೆಯವರಿಗೆ ವಿಷಯ ಸಿಡಿಲಿನಂತೆ ತಲುಪಿ ಅವರೂ ತನಿಖೆ ಮಾಡುವ ಸ್ಟೈಲಿನಲ್ಲಿ ನಮ್ಮನ್ನು ಹುಡುಕಿಕೊಂಡು ಬಂದರು. ಮಾಹಿತಿ ಬರೆದುಕೊಂಡರು. ಅದರಲ್ಲೊಬ್ಬ ಅಧಿಕಾರಿ, 'ಅದೇನೋ ನೋಡಿ, ಪ್ರತಿ ವರ್ಷದಲ್ಲಿ ಒಂದು ಸಾರಿ ಸರಿಯಾಗಿ ಇದೇ ಸಮಯದಲ್ಲಿ ಅದು ಇಲ್ಲಿಂದ ಪಾಸ್ ಆಗುತ್ತೆ. ಅದರ ಈ ನಿಗದಿತ ವೇಳಾಪಟ್ಟಿಯೇ ನಮಗೆ ಅರ್ಥವಾಗುತ್ತಿಲ್ಲ. ಈ ಚಿರತೆಗಳನ್ನು ಅಚಾನಕ್ಕಾಗಿ ನೋಡಿದವರಿದ್ದರು. ಆದರೆ, ನಿಮ್ಮಂತೆ ಫೋಟೊ ತೆಗೆಯುವ ದುಸ್ಸಾಹಸಕ್ಕೆ ಯಾರೂ ಕೈ ಹಾಕಿರಲಿಲ್ಲ. ಒಟ್ನಲ್ಲಿ ನಿಮ್ಮ ನಸೀಬು ಗಟ್ಟಿಯಿದೆ ಅಷ್ಟೆ. ಇಂತಹ ಸಮಯದಲ್ಲಿ ನೀವು ಕಾರೋ, ಜೀಪಿನಲ್ಲೋ ಕೂತಿದ್ದರೆ ಪರವಾಗಿಲ್ಲ. ಅದೂ ಹೀಗೆ ತೆರೆದ ದಾರಿಯಲ್ಲಿ ಅದರ ಕೈಯಲ್ಲಿ ಸಿಕ್ಕಿ ಬೀಳುವುದು ಅಪಾಯಕಾರಿ. ಮೊದಲೇ ಮರಿಗಳಿರುವ ಚಿರತೆ ಅದು. ಈ ಟೈಮಲ್ಲಿ ಪ್ರಾಣಿಗಳು ಏನು ಮಾಡಲೂ ಹೇಸುವುದಿಲ್ಲ. ತುಂಬಾ ಆಕ್ರಮಣ ಸ್ವಭಾವ ತೋರಿಸಿ ಬಿಡುತ್ತವೆ. ಒಟ್ಟಾರೆ ಈ ಕಾಡು ಪ್ರಾಣಿಗಳೇ ಹಾಗೆ. ಮಕ್ಕಳು ಮರಿ ಇದ್ದಾಗ ಅವುಗಳ ಸಹವಾಸ ಒಳ್ಳೆಯದಲ್ಲ' ಎಂದು ನಿಟ್ಟುಸಿರು ಚೆಲ್ಲಿದರು. ●